ದಿನಾಂಕಃ 09-02-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ 3 ನೇ ಎದುರುದಾರರ ಪರವಾಗಿ ಶ್ರೀ ಸಿ.ಎಸ್.ಎನ್. ವಕೀಲರಿಂದಃ**

*3.* ನಾನು *7* ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ತಿಳಿಸಿರುವ ಎಲ್ಲಾ ವಿಚಾರಗಳು ನನಗೆ ತಿಳಿದಿದೆ. ಅದನ್ನು ನೀವೇ ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. *4* ನೇ ಎದುರುದಾರರಾದ ಗೌರಮ್ಮ ನನಗೆ ಅಜ್ಜಿಯಾಗಬೇಕು, ಅಂದರೆ ನನ್ನ ತಂದೆಯ ತಾಯಿ. ಸದರಿ ಗೌರಮ್ಮರವರಿಗೆ *3* ಜನ ಮಕ್ಕಳು, ಅವರೆಂದರೆ ರತ್ನಮ್ಮ, ಲೋಕೇಶಪ್ಪ ಮತ್ತು ಚಂದ್ರಪ್ಪ ಅಲಿಯಾಸ್ ಚಂದ್ರಶೇಖರಪ್ಪ. *4(ಡಿ)* ನೇ ಎದುರುದಾರರಾದ ಶಾಂತಮ್ಮರವರು *4(ಎ)* ನೇ ಎದುರುದಾರರಾದ ಲೋಕೇಶಪ್ಪರವರ ಹೆಂಡತಿ. ನಾನು, *4(ಜಿ)* ನೇ ಎದುರುದಾರರಾದ ಶೈಲಜಾರವರು, *4(ಹೆಚ್)* ನೇ ಎದುರುದಾರರಾದ ಶ್ರೀದೇವಿರವರು ಸದರಿ ಶಾಂತಮ್ಮ ಮತ್ತು ಲೋಕೇಶಪ್ಪರವರ ಮಕ್ಕಳು. *4(ಇ)* ನೇ ಎದುರುದಾರರಾದ ಭಾಗ್ಯರವರು *4(ಸಿ)* ನೇ ಎದುರುದಾರರಾದ ಚಂದ್ರಪ್ಪರವರ ಹೆಂಡತಿ. *2025* ನೇ ಇಸವಿ ಜನವರಿ ತಿಂಗಳಿನಲ್ಲಿ ಗೌರಮ್ಮರವರು ತೀರಿಕೊಂಡಿರುತ್ತಾರೆ. ಈ ಪ್ರಕರಣದಲ್ಲಿ ಯಾರನ್ನೆಲ್ಲಾ ಪಕ್ಷಗಾರನ್ನಾಗಿ ಮಾಡಲಾಗಿದೆ ಎಂದು ನಿಮಗೆ ತಿಳಿದಿದೆಯೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

*4.* ಸ್ವಾಧೀನಪಡಿಸಿಕೊಳ್ಳಲಾದ ಜಮೀನನ್ನು ನಮ್ಮ ತಾತ ಅಂದರೆ ಗೌರಮ್ಮರವರ ಗಂಡನಾದ ಹನುಮಂತಪ್ಪರವರು ಖರೀದಿಸಿದ್ದರು. ಅದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಗದಿಯಾತ್ ಕಾವಲ್ ಗ್ರಾಮದ ಸರ್ವೆ

ನಂಬರು *4/14* ರಲ್ಲಿ ಒಂದು ಎಕರೆ *15* ಗುಂಟೆ ಜಮೀನನ್ನು ನಮ್ಮ ತಾತ ಹನುಮಂತಪ್ಪರವರು ಖರೀದಿಸಿದ್ದರು. ಸದರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ, ಆದರೆ ಎಷ್ಟು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಆ ಬಗ್ಗೆ ಎಷ್ಟು ಪರಿಹಾರವನ್ನು ನೀಡಲಾಗಿದೆ ಎಂದು ನನಗೆ ಗೊತ್ತಿಲ್ಲ.

*5.* ಸ್ವಾಧೀನಪಡಿಸಿಕೊಂಡ ಕಾಲಕ್ಕೆ ಜಮೀನಿನ ಖಾತೆ *3* ನೇ ಎದುರುದಾರರಾದ ಚಂದ್ರಮ್ಮರವರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು *3* ನೇ ಎದುರುದಾರರಿಂದ *4* ನೇ ಎದುರುದಾರರ ಗಂಡ ಮೇಲೆ ಹೇಳಿದ ಜಮೀನನ್ನು ಖರೀದಿ ಮಾಡಿದ್ದರು ಎನ್ನುತ್ತಾರೆ. ಆವಾರ್ಡ ನೋಟೀಸನ್ನು *3* ನೇ ಎದುರುದಾರರ ಹೆಸರಿಗೆ ನೀಡಲಾಗಿತ್ತು ಮತ್ತು ಪರಿಹಾರದ ಹಣವನ್ನು ಅವರ ಹೆಸರಿನಲ್ಲಿ ಡೆಪಾಸಿಟ್ ಇರಿಸಲಾಗಿದೆ ಎಂದರೆ ಸಾಕ್ಷಿ ಅವರಿಗೆ ನೋಟೀಸ್ ನೀಡಿದ ಬಳಿಕ ನಮ್ಮ ತಾತನ ಹೆಸರಿಗೆ ಕ್ರಯವಾಗಿದ್ದರೂ ಸಹ ನಮ್ಮ ಹೆಸರಿಗೆ ಖಾತೆಯಾಗದ ವಿಚಾರ ತಿಳಿಯಿತು ಎನ್ನುತ್ತಾರೆ.

*6.* ಕಡೂರಿನ ನ್ಯಾಯಾಲಯದಲ್ಲಿ ನಾನೇ ದಾವೆಯನ್ನು ಹಾಕಿದ್ದೆನು. ಸದರಿ ದಾವೆಯ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ದಾವೆಯನ್ನು ಹಾಕಲು ನಾನೇ ವಕೀಲರಿಗೆ ಮಾಹಿತಿ ಕೊಟ್ಟಿದ್ದೆನು. ಸದರಿ ದಾವೆಯನ್ನು ಯಾವ ಗ್ರಾಮ, ಯಾವ ಜಮೀನಿಗೆ ಸಂಬಂಧಿಸಿದ್ದು ಹಾಕಲಾಗಿದೆ ಎಂದರೆ ಸಾಕ್ಷಿ ನಗದಿಯಾತ್ ಕಾವಲ್ ಗ್ರಾಮದ ಗದ್ಲೇಹಳ್ಳಿ ಗ್ರಾಮಕ್ಕೆ ಸಂಬಂಧಿಸಿದ ಸರ್ವೆ ನಂಬರು *4/14* ಕ್ಕೆ ಸಂಬಂಧಿಸಿದ್ದು ಎನ್ನುತ್ತಾರೆ. ಗೆದ್ಲೇಹಳ್ಳಿ ಮತ್ತು ನಗದಿಯಾತ್ ಕಾವಲ್ ಗ್ರಾಮ ಬೇರೆ ಬೇರೆ ಗ್ರಾಮಗಳು ಎಂದರೆ ಸಾಕ್ಷಿ

ಸದರಿ ಊರುಗಳ ಮಧ್ಯೆ ಸುಮಾರು ಒಂದರಿಂದ ಒಂದೂವರೆ ಕಿಮೀ ಅಂತರ ಇರುವುದರಿಂದ ಬೇರೆ ಬೇರೆ ಹೆಸರುಗಳನ್ನು ಇಡಲಾಗಿದೆ ಎನ್ನುತ್ತಾರೆ.

*7.* ಸ್ವಾಧೀನಪಡಿಸಿಕೊಳ್ಳಲಾದ ಜಮೀನು ನಗದಿಯಾತ್ ಕಾವಲಿಗೆ ಸೇರಿದ್ದು. ಸ್ವಾಧೀನಪಡಿಸಿಕೊಳ್ಳಲಾದ ನಗದಿಯಾತ್ ಕಾವಲ್ ಗೆ ಸೇರಿದ ಸರ್ವೆ ನಂಬರು *4/14* ರಲ್ಲಿ ಉಳಿದಿರುವ ಜಮೀನಿನಲ್ಲಿ ಈಗಲೂ ಸಹ *3* ನೇ ಎದುರುದಾರರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಖರೀದಿಸಿದ ಒಂದು ಎಕರೆ *15* ಗುಂಟೆ ಜಮೀನಿನಲ್ಲಿ ನಾವೇ ಸ್ವಾಧೀನದಲ್ಲಿದ್ದೇವೆ ಎನ್ನುತ್ತಾರೆ. ನಿಮಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಭೂಸ್ವಾಧೀನಾಧಿಕಾರಿಗಳು ನೀಡಿರುವ ಪರಿಹಾರದ ಮೊತ್ತಕ್ಕೆ *3* ನೇ ಎದುರುದಾರರ ಸಂಪೂರ್ಣ ಹಕ್ಕನ್ನು ಉಳ್ಳವರಾಗಿರುತ್ತಾರೆ ಎಂದರೆ ಸರಿಯಲ್ಲ.

*8.* ನೀವು ಕಡೂರಿನ ನ್ಯಾಯಾಲಯದಲ್ಲಿ ದಾವೆಯನ್ನು ಹಾಕಿರುವುದು ಗೆದ್ಲೇಹಳ್ಳಿ ಗ್ರಾಮದ ಸರ್ವೆ ನಂಬರು *4/14* ಕ್ಕೆ ಹಾಗಾಗಿ ಸದರಿ ಜಮೀನಿಗೂ ಸ್ವಾಧೀನಪಡಿಸಿಕೊಳ್ಳಲಾದ ಜಮೀನಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸಾಕ್ಷಿ ಸದರಿ ಜಮೀನು ನಗದಿಯಾತ್ ಕಾವಲ್ ನಲ್ಲಿದೆ ಅದು ಗೆದ್ಲೇಹಳ್ಳಿ ಗ್ರಾಮಕ್ಕೆ ಸೇರಿದ್ದಾಗಿರುತ್ತದೆ ಎನ್ನುತ್ತಾರೆ. ಸ್ವಾಧೀನಪಡಿಸಿಕೊಳ್ಳಲಾದ ನಗದಿಯಾತ್ ಕಾವಲ್ ನ ಸರ್ವೆ ನಂಬರು *4/14* ಜಮೀನು *3* ನೇ ಎದುರುದಾರರಿಗೆ ಸೇರಿದ್ದು ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1, 2** ಮತ್ತು **5** ನೇ ಎದುರುದಾರರ ಪರವಾಗಿ ಶ್ರೀ ಕೆ.ಸಿ.ಎಸ್. ವಕೀಲರಿಂದಃ</u>

*9.* ಭೂಸ್ವಾಧೀನಾಧಿಕಾರಿಗಳು *1, 2* ಮತ್ತು *5* ನೇ ಎದುರುದಾರರಾದ ರಾಮಪ್ಪ, ಗೋವಿಂದಪ್ಪ ಮತ್ತು ರತ್ನಮ್ಮರವರಿಗೆ ಸೇರಿದ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ಸರಿ. ಅದರ ಬಾಬ್ತು ಅವರ ಹೆಸರಿನಲ್ಲಿ ಐತೀರ್ಪನ್ನು ಹೊರಡಿಸಿದ್ದಾರೆ ಎಂದರೆ ಸರಿ. ಅವರಿಗೆ ಸಂಬಂಧಿಸಿದ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನೀಡಲಾಗಿರುವ ಪರಿಹಾರವನ್ನು ಅವರಿಗೆ ನೀಡಲು ನನಗೆ ಯಾವುದೇ ತಕರಾರು ಇಲ್ಲ. ಪರಿಹಾರದ ಹಣವನ್ನು *1, 2* ಮತ್ತು *5* ನೇ ಎದುರುದಾರರಿಗೆ ನೀಡಬಾರದೆಂದು ನೀವು ಭೂಸ್ವಾಧೀನಾಧಿಕಾರಿಗಳಿಗೆ ತಕರಾರು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಓ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.